# ಮುರುಘಾಮಠಕ್ಕೆ ಸಂಸದ ಎ. ನಾರಾಯಣ ಸ್ವಾಮಿ ಭೇಟಿ

ಚಿತ್ರದುರ್ಗ ಸಂಸದರಾದ ಎ.ನಾರಾಯಣಸ್ವಾಮಿ ಅವರು ಶ್ರೀ ಮುರುಘರಾಜೇಂದ್ರ ಮಠಕ್ಕೆ ಭೇಟಿ ನೀಡಿ ಡಾ. ಶಿವಮೂರ್ತಿ ಮುರುಘಾ ಶರಣರಿಂದ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಚರ್ಚಿಸಿದರು. ಜಿಲ್ಲೆಯನ್ನು ಪ್ರವಾಸಿ ತಾಣವಾಗಿಸಲು ಈಗಾಗಲೇ ಹಲವು ಸ್ಥಳಗಳನ್ನು ಗುರುತಿಸಲಾಗಿದೆ. ಕೋಟೆ, ಚಂದ್ರವಳ್ಳಿ, ಜೋಗಿಮಟ್ಟಿ, ಮುರುಘರಾಜೇಂದ್ರ ಮಠ, ಜಟ್ಟಿಂಗ ರಾಮೇಶ್ವರ ಸೇರಿದಂತೆ ಹಲವು ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ ಆ ಕಾರ್ಯ ಚಾಲನೆಯಲ್ಲಿದೆ ಎಂದು ಹೇಳಿದರು.

ಶ್ರೀಗಳು ಮಾತನಾಡುತ್ತ, ಮೊದಲು ಭದ್ರಾ ಮೇಲ್ದಂಡೆ ಕಾಮಗಾರಿ ಪೂರ್ಣಗೊಳ್ಳಬೇಕು. ಚಿತ್ರದುರ್ಗಕ್ಕೆ ನೀರು ಬರಬೇಕು. ಅದರೊಟ್ಟಿಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿಯಾಗಬೇಕು. ನಾವು ನಿಮ್ಮೊಟ್ಟಿಗೆ ಸದಾ ಇರುತ್ತೇವೆ. ಶ್ರೀಮಠದ ಜೊತೆ ಚಂದ್ರವಳ್ಳಿ ಮತ್ತು ಕೋಟೆಯ ಅಭಿವೃದ್ಧಿ ಕಡೆ ಹೆಚ್ಚು ಗಮನಹರಿಸಬೇಕು ಹಾಗೂ ಸಂಸದರಾದ ತಾವು ಕೇಂದ್ರ ಮತ್ತು ರಾಜ್ಯಸರ್ಕಾರದ ಮೇಲೆ ಒತ್ತಡ ತಂದು ಜಿಲ್ಲೆಯನ್ನು ಒಂದು ಪ್ರವಾಸಿತಾಣವಾಗಿ ಮಾಡಬೇಕು. ಇರುವಷ್ಟು ಅಧಿಕಾರವಧಿಯೊಳಗೆ ಮಾಡುವ ಕಾರ್ಯ ಪೂರ್ಣಗೊಳಿಸಿದರೆ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ಹೇಳಿದರು.

ಅಜ್ಜಂಪುರದ ಮುಂದೆ ಅಬ್ಬಿನಹೊಳೆ ಹತ್ತಿರ ಸ್ವಲ್ಪ ಕೆಲಸಕ್ಕೆ ತೊಡಕಾಗಿರುವ ಬಗ್ಗೆ ಶ್ರೀಗಳು ಗಮನಸೆಳೆದಾಗ, ಇನ್ನೆರಡು ದಿನಗಳಲ್ಲಿ ಅದನ್ನು ಬಗೆಹರಿಸುವುದಾಗಿ ಸಂಸದರು ಹೇಳಿದರು. ನಂತರ ಮುರುಘಾ ವನ, ಕಾಯಕ ಗ್ರಾಮ, ದೋಣಿ ವಿಹಾರ, ಪ್ರಾಣಿಜಗತ್ತು ಮೊದಲಾದುವನ್ನು ವೀಕ್ಷಿಸಿದರು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಎಸ್.ಜೆ.ಎಂ. ಕಾಲೇಜಿನ ಪ್ರಾಚಾರ್ಯ ಪ್ರೊ. ರಮೇಶ್, ಆರ್.ಲಿಂಗರಾಜು ಮೊದಲಾದವರಿದ್ದರು.




ಬೆಂಗಳೂರು ಮುದ್ರಣಾಲಯ


ಬೆಂಗಳೂರು ಮುದ್ರಣಾಲಯ

